ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.3085/2023

ಪಿ .ಡಬ್ಲ್ಯೂ :2

ಸಾಕ್ಷಿಯನ್ನು ದಿಃ 02-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಾನು ಸಿ ಎಸ್ ಪುರ ಹೋಬಳಿಯಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಸಮಯ ಅವ್ವೇರಹಳ್ಳಿಯಲ್ಲಿ ಕೆಲಸ ಮಾಡಿಲ್ಲ .ಅವ್ವೇರಹಳ್ಳಿ ಗ್ರಾಮದಲ್ಲಿ ನರಸಿಂಹಸ್ವಾಮಿ ದೇವಸ್ಥಾನವಿದೆ ಎಂದರೆ ಸರಿ . ಸದರಿ ದೇವಸ್ಥಾನದ ಅರ್ಚಕರ ವಿಚಾರವಾಗಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ . ಸದರಿ ದೇವಸ್ಥಾನದ ಅರ್ಚಕರ ಅಧಿಕಾರದ ಹಸ್ತಾಂತರದ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲ . ತಾಲ್ಲೂಕು ಕಚೇರಿಯಲ್ಲಿ ಮಧ್ಯಾಹ್ನ 3.00 ಗಂಟೆಯ ನಂತರ ಸಾರ್ವಜನಿಕರ ಸಂದರ್ಶನಕ್ಕೆ ಅವಕಾಶ ನೀಡಲಾಗುತ್ತದೆ . ತಾಲ್ಲೂಕು ಕಚೇರಿಯಲ್ಲಿ ಯಾವಾಗಲೂ ಹೆಚ್ಚಿನ ಜನ ಜಂಗುಳಿ ಇರುತ್ತದೆ ಎಂದರೆ ಸರಿ . ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ದಿನಾಂಕದಂದು ನಾನು ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ . ನಾನು ಪ್ರತಿದಿನವೂ ತಾಲ್ಲೂಕು ಕಚೇರಿಯಲ್ಲಿ ಬೆಳಗ್ಗೆ 10.30 ರಿಂದ 1.30 ರಿಂದ ಮತ್ತು ಮಧ್ಯಾಹ್ನ 2.30 ರಿಂದ 5.30 ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಕರ್ತವ್ಯದ ಅವಧಿಯಲ್ಲಿ ಕಚೇರಿಯಿಂದ ಹೊರಗೆ ಹೋಗಬೇಕಿದ್ದಲ್ಲಿ ಚಲನ ವಲನಾ ಪುಸ್ತಕದಲ್ಲಿ ನಮೂದಿಸುತ್ತೇವೆ ಎಂದರೆ ಸರಿ . ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ದಿನಾಂಕ ಮತ್ತು ಸಮಯ ನಾನು ತಾಲ್ಲೂಕು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿಲ್ಲ ಎಂದರೆ ಸರಿಯಲ್ಲ . ತಾಲ್ಲೂಕು ಕಚೇರಿಯಲ್ಲಿ ಶಿರಸ್ತೇದಾರರಿಗೆ ಪ್ರತ್ಯೇಕ ಕೊಠಡಿ ಇರುತ್ತದೆ ಎಂದರೆ ಸರಿ . ಪ್ರತ್ಯೇಕ ವಿಭಾಗಕ್ಕೆ ಸಂಬಂಧಿಸಿ ಪ್ರತ್ಯೇಕ ಕಚೇರಿಯ ಕೊಠಡಿ ಇರುತ್ತದೆ ಎಂದರೆ ಸರಿ . ಆಯಾ ವಿಭಾಗಗಳಲ್ಲಿ ಸಂಬಂಧಿಸಿದ ನೌಕರರು ಕೆಲಸ ನಿರ್ವಹಿಸಿಕೊಂಡು ಹೋಗುತ್ತಾರೆ ಎಂದರೆ ಸರಿ . ಕಚೇರಿಗೆ ಬರುವ ಸಾರ್ವಜನಿಕರಲ್ಲಿ ಕೆಲವರ ಧ್ವನಿ ಗಡಸು ಧ್ವನಿಯಾಗಿರುತ್ತದೆ ಮತ್ತು ಕೆಲವರ ಧ್ವನಿ ಮೆಲುದನಿಯಾಗಿರುತ್ತದೆ ಎಂದರೆ ಸರಿ .

ದಿಃ 13-01-2023 ರಂದು ನಮ್ಮ ಕಚೇರಿಯಲ್ಲಿ ಶ್ರೀರಂಗ , ನಾಗರಾಜು , ಶ್ರೀನಿವಾಸಮೂರ್ತಿ ಸತ್ಯಕಲಾ , ರಕ್ಷಿತ್ ಹಾಗೂ ಇನ್ನು ಇತರರು ಕೆಲಸ ಮಾಡುತ್ತಿದ್ದೆವು .

ಸದರಿ ದಿನಾಂಕದಂದು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರುಗಳನ್ನು ತಾಲ್ಲೂಕು ಕಚೇರಿಯಲ್ಲಿ ನೋಡಿದ್ದೇನೆ . ನಾನು ಮುಜರಾಯಿ ಇಲಾಖೆಗೆ ಸಂಬಂಧಿಸಿದ ಇಲಾಖೆಯಲ್ಲಿ ಕೆಲಸ ಮಾಡಿಲ್ಲ . 1 ನೇ ಆರೋಪಿತರು ಮುಜರಾಯಿ ಇಲಾಖೆಯಿಂದ ನೇಮಿಸಲ್ಪಟ್ಟ ಅರ್ಚಕರು ಎಂದರೆ ಸರಿ . ಅವರ ಅರ್ಚಕ ವೃತ್ತಿಗೆ ಸರ್ಕಾರದಿಂದ ಸ್ವಸ್ಥಿಕ್ ಹಣ ನೀಡಲಾಗುತ್ತದೆ ಎಂದರೆ ಸರಿ . ಸದರಿ ಹಣ ಪಡೆಯಲು ಅವರು ನಮ್ಮ ಕಚೇರಿಗೆ ಸಾಕಷ್ಟು ಬಾರಿ ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . 1 ನೇ ಆರೋಪಿತರು ಅರ್ಚಕ ವೃತ್ತಿಯ ಅಧಿಕಾರದ ಹಸ್ತಾಂತರದ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಜಿಲ್ಲಾಧಿಕಾರಿಗಳ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . ಅಧಿಕಾರ ಹಸ್ತಾಂತಕ್ಕೆ ಸಂಬಂಧಿಸಿ ತಾಲ್ಲೂಕು ಕಚೇರಿಯ ಶಿರಸ್ತೇದಾರರಾದ ಶ್ರೀರಂಗ ರವರು ಪೂಜಾ ಸಾಮಗ್ರಿಗಳನ್ನು ವಶಕ್ಕೆ ಪಡೆದು ಮಹಜರು ಮಾಡಿದ್ದರು , ಸದರಿ ಮಹಜರಿನ ಪ್ರತಿ ನೀಡಬೇಕೆಂದು 1 ನೇ ಆರೋಪಿತರು ಹಾಗೂ ಅವರ ಮಗ ಅಚ್ಯುತ್ ರವರು ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ . ನಮ್ಮ ಕಚೇರಿಯವರು ಮಹಜರಿನ ಪ್ರತಿ ನೀಡದೇ ಸತಾಯಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ . ಮೇಲೆ ಹೇಳಿದ ದಿನಾಂಕದಂದು ಆರೋಪಿತರುಗಳು ನಮ್ಮ ಕಚೇರಿಗೆ ಬಂದಿಲ್ಲ ಮತ್ತು ನಾನು ಹೇಳುವಂತೆ ಜೋರು ಧ್ವನಿಯಲ್ಲಿ ಮಾತನಾಡಿಲ್ಲ ಎಂದರೆ ಸರಿಯಲ್ಲ . ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರುಗಳು ನಮ್ಮ ಕಚೇರಿಗೆ ಬಂದು ಮಹಜರಿನ ಪ್ರತಿ ನೀಡುವಂತೆ ವಾಗ್ವಾದ ಮಾಡಿ ಜೋರು ಧ್ವನಿಯಲ್ಲಿ ಮಾತನಾಡಿದ್ದಾರೆ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ . ಮೇಲೆ ಹೇಳಿದಂತೆ ಆರೋಪಿತರುಗಳು ನಮ್ಮ ಕಚೇರಿಯಲ್ಲಿ ಯಾವುದೇ ಗಲಾಟೆ ಮಾಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹೇಳುವಂತೆ ಆರೋಪಿತರುಗಳು ನಮ್ಮ ಕರ್ತವ್ಯಕ್ಕೆ ಯಾವುದೇ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ . ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿ .

<u>ಮರುವಿಚಾರಣೆ:</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.